# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಅನ್ವರ್ ಪಾಷಾ, ನಿವೃತ್ತ ಐಎಎಸ್ ಅಧಿಕಾರಿ [ಆಯ್ಕೆ ಶ್ರೇಣಿ] ಇವರನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಮಾಲೋಚಕರಾಗಿ [Consultant] ನೇಮಿಸುವ ಕುರಿತು.

ಉಲ್ಲೇಖ:
1. ಶ್ರೀ ಅನ್ವರ್ ಪಾಷಾ, ನಿವೃತ್ತ ಐಎಎಸ್ ಅಧಿಕಾರಿ ಇವರ ಒಪ್ಪಿಗೆ ಪತ್ರ ದಿನಾಂಕ: 01.02.2012.
2. ಸರ್ಕಾರಿ ಆದೇಶ ಸಂಖ್ಯೆ ಗ್ರಾಅಪ/3/ಸ್ವಜೆಸಿ/2012 ದಿನಾಂಕ 08.02.2012, 09.04.2012 10.08.2012 ಹಾಗೂ ದಿನಾಂಕ 23.11.2012.

-:0:-

**ಪ್ರಸ್ತಾವನೆ:-**

ಉಲ್ಲೇಖ [2]ರ ಸರ್ಕಾರಿ ಆದೇಶದಲ್ಲಿ ಸದರಿ ಅಧಿಕಾರಿಯವರನ್ನು ದಿನಾಂಕ 31.03.2013ರವರೆಗೆ ತಾತ್ಕಾಲಿಕವಾಗಿ ನೇಮಿಸಿಕೊಳ್ಳಲಾಗಿದ್ದು, ತದನಂತರ, ಇವರ ಸೇವೆಯನ್ನು ದಿನಾಂಕ 31.08.2013 ರವರೆಗೆ ಮುಂದುವರೆಸಲು ತೀರ್ಮಾನಿಸಲಾಗಿದೆ. ಆದ್ದರಿಂದ, ಈ ಆದೇಶ.

## ಸರ್ಕಾರದ ಆದೇಶ.ಸಂಖ್ಯೆ: ಗ್ರಾಅಪ/3/ಸ್ವಜೆಸಿ/2012 ಬೆಂಗಳೂರು, ದಿನಾಂಕ 23.03.2013

ಶ್ರೀ ಅನ್ವರ್ ಪಾಷಾ, ನಿವೃತ್ತ ಐಎಎಸ್ ಅಧಿಕಾರಿಯವರನ್ನು [ಆಯ್ಕೆ ಶ್ರೇಣಿ] ಸಾಮಾಜಿಕ ಆರ್ಥಿಕ ಮತ್ತು ಜಾತಿ ಗಣತಿ [ಸೋಷಿಯೋ ಎಕನಾಮಿಕ್ ಅಂಡ್ ಕ್ಯಾಸ್ಟ್ ಸೆನ್ಸ್ – ಎಸ್‌ಇಸಿಸಿ–2011] ಕಾರ್ಯಕ್ರಮದ ಸಮಾಲೋಚಕರನ್ನಾಗಿ ದಿನಾಂಕ 01.04.2013 ರಿಂದ ದಿನಾಂಕ 31.08.2013 ರವರೆಗೆ ಅಥವಾ ಎಸ್‌ಇಸಿಸಿ–2011 ಕಾರ್ಯಕ್ರಮಗಳು ಮುಗಿಯುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಈ ಕೆಳಕಂಡ ನಿಬಂಧನೆಗಳಿಗೊಳಪಟ್ಟು ತಾತ್ಕಾಲಿಕವಾಗಿ ನೇಮಿಸಿಕೊಳ್ಳಲಾಗಿದೆ.

**ನಿಬಂಧನೆ :-**

- ಸಮಾಲೋಚಕರ ನೇಮಕಾತಿ ಅವಧಿ ದಿನಾಂಕ 01.04.2013 ರಿಂದ ಪೂರ್ವಾನ್ವಯವಾಗುವಂತೆ ದಿನಾಂಕ 31.08.2013 ರವರೆಗೆ ಮಾತ್ರ ಅಸ್ತಿತ್ವದಲ್ಲಿ ಇರುತ್ತದೆ.
- ಸಮಾಲೋಚಕರಿಗೆ ಸಂಚಿತವಾಗಿ ಮಾಸಿಕ ರೂ.40,000/- [ರೂ.ನಲವತ್ತು ಸಾವಿರ ಮಾತ್ರ] ಗಳನ್ನು ಗೌರವಧನವಾಗಿ ಪಾವತಿಸಲಾಗುವುದು.
- ದೂರವಾಣಿ [ಕಛೇರಿ ಮತ್ತು ನಿವಾಸ], ಮೊಬೈಲ್ ಹಾಗೂ ವಾಹನ ಸೌಲಭ್ಯಕ್ಕೆ ಅರ್ಹರಿರುತ್ತಾರೆ.
- ಎಸ್‌ಇಸಿಸಿ–2011 ಉದ್ದೇಶಕ್ಕಾಗಿ ರಾಜ್ಯ ಅಥವಾ ಹೊರ ರಾಜ್ಯಗಳಿಗೆ ಪ್ರವಾಸ ಕೈಗೊಂಡಲ್ಲಿ, ಪ್ರವಾಸ ಹಾಗೂ ದಿನಭತ್ಯೆಯನ್ನು ಸದರಿ ಅಧಿಕಾರಿಯವರು ನಿವೃತ್ತಿ ಮುನ್ನಾ ಕೆಸಿಎಸ್‌ಆರ್ ನಿಯಮಾವಳಿಯಂತೆ ಪಡೆಯುತ್ತಿದ್ದ ಭತ್ಯೆಗಳಂತೆ ಅರ್ಹರಿದ್ದು, ಅದರಂತೆ ಪಾವತಿಸಲಾಗವುದು.

- ಸದರಿ ಹುದ್ದೆಗೆ ತಗಲುವ ಎಲ್ಲಾ ವೆಚ್ಚವನ್ನು ಎಸ್‌ಇಸಿಸಿ-2011 ಅನುದಾನದಿಂದ ಭರಿಸುವುದು.
- ಕೆಲಸದ ವೇಳೆ- ಕಛೇರಿ ವೇಳೆಯಾಗಿರುತ್ತದೆ.
- ಸಮಾಲೋಚಕರಿಗೆ ಪ್ರತಿ ಮಾಹೆ ಒಂದು ದಿನದ ರಜೆ ಪಡೆಯಲು ಅರ್ಹರಿದ್ದು, ಉಳಿದ ಯಾವುದೇ ರಜೆ ಸೌಲಭ್ಯಗಳಿಗೆ ಅರ್ಹರಿರುವುದಿಲ್ಲ.
- ನಿರ್ದೇಶಕರು [ಸ್ವಉಕಾ] ಹಾಗೂ ಪ.ನಿ.ಸರ್ಕಾರದ ಉಪ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರೊಂದಿಗೆ ಸಹಕರಿಸುವುದು.
- ಜಿಲ್ಲೆಗಳಿಗೆ ಪ್ರವಾಸ ಮಾಡಿ ಗಣತಿ ಕಾರ್ಯ ಪರಿಶೀಲಿಸಿ ಸೂಕ್ತ ಸಲಹೆ ಸೂಚನೆ ನೀಡುವುದು.
- ಬಿಇಎಲ್ ಸಂಸ್ಥೆ, ಜನಗಣತಿ ನಿರ್ದೇಶನಾಲಯ, ಎನ್‌ಐಸಿ, ಕಛೇರಿಗಳೊಂದಿಗೆ ಗಣತಿಗೆ ಸಂಬಂಧಿಸಿದಂತೆ ಸಮನ್ವಯ ಸಾಧಿಸುವುದು.
- ಎಸ್‌ಇಸಿಸಿ-2011ರ ಗಣತಿಯಿಂದ ಸಂಗ್ರಹಿಸಿದ ಮಾಹಿತಿಯು ಸರಿಯಾಗಿ ನಮೂದಿತವಾಗಿರುವ ಬಗ್ಗೆ ಖುದ್ದು ಪರಿಶೀಲಿಸುವುದು.
- ಸಾಮಾಜಿಕ, ಆರ್ಥಿಕ ಮತ್ತು ಜಾತಿ ಗಣತಿ [ಸೋಷಿಯೋ ಏಕನಾಮಿಕ್-ಅಂಡ್ ಕ್ಯಾಸ್ಟ್ ಸೆನ್ಸಸ್ - ಎಸ್‌ಇಸಿಸಿ-2011] ಕಾರ್ಯಕ್ರಮದ ಉಸ್ತುವಾರಿ, ಪ್ರಗತಿ ಪರಿಶೀಲನೆ ನಡೆಸುವುದು.
- ಸಮಾಲೋಚಕರು ಆಯಾ ಮಾಸಿಕದಲ್ಲಿ ಎಸ್‌ಇಸಿಸಿ-2011ರ ಬಗ್ಗೆ ನಿರ್ವಹಿಸಿದ ಕಾರ್ಯ/ಪ್ರಗತಿ ಪರಿಶೀಲನೆಗಳ ವರದಿಯನ್ನು ಪ್ರತಿ 15 ದಿನಗಳಿಗೊಮ್ಮೆ ಸಲ್ಲಿಸುವುದು.
- ಇಲಾಖೆಯ ಮುಖ್ಯಸ್ಥರು ಕಾಲಕಾಲಕ್ಕೆ ವಹಿಸುವ ಇತರೆ ಯಾವುದೇ ಕಾರ್ಯವನ್ನು ನಿರ್ವಹಿಸುವುದು.
- ಸದರಿಯವರ ಸೇವೆಯ ಅವಶ್ಯಕತೆ ಕಂಡುಬಂದಲ್ಲಿ ಮಾತ್ರ ಅವರ ಸೇವೆಯನ್ನು ಮುಂದುವರೆಸಲಾಗುವುದು.
- ಸಮಾಲೋಚಕರ ಸೇವೆ ತೃಪ್ತಿಕರವಾಗಿ ಕಂಡಬರದಿದ್ದಲ್ಲಿ ಅವರನ್ನು ಸೇವೆಯಿಂದ ತೆಗೆದು ಹಾಕಲಾಗುವುದು.
- ಸಮಾಲೋಚಕರಾಗಿ ಮುಖ್ಯವಾಗಿ ನಿರ್ವಹಿಸಬೇಕಾದ ಕರ್ತವ್ಯಗಳು:

    1. Training. 2.Follow up with Districts. 3.Preparing Reports
    4. Helping DC's in Shooting problems 5.Preparing Press Note
    6. Liasoning with Director of Census and BEL 7.Visiting Districts for Review 8. Liasoning with GOI.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

22/3/13
[ಎಂ.ದೀಪ]
ನಿರ್ದೇಶಕರು (ಎಸ್‌ಇಪಿ)
ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಪ್ರಧಾನ ಎಸ್‌ಇಸಿಸಿ-2011 ರ ಅಧಿಕಾರಿಗಳು.
2. ಆಯುಕ್ತರು ಹಾಗೂ ಪ್ರಧಾನ ಎಸ್‌ಇಸಿಸಿ-2011ರ ಅಧಿಕಾರಿಗಳು, ಬಿಬಿಎಂಪಿ, ಬೆಂಗಳೂರು.

3. ಆಯುಕ್ತರು ಹಾಗೂ ಪ್ರಧಾನ ಎಸ್‌ಇಸಿಸಿ–2011ರ ಅಧಿಕಾರಿಗಳು – ಬಳ್ಳಾರಿ, ಬೆಳಗಾವಿ, ಹುಬ್ಬಳ್ಳಿ–ಧಾರವಾಡ, ದಾವಣಗೆರೆ, ಮೈಸೂರು, ಮಂಗಳೂರು ಮತ್ತು ಗುಲ್ಬರ್ಗಾ ಮಹಾನಗರ ಪಾಲಿಕೆಗಳು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳು.
5. ಸರ್ಕಾರದ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳು.
6. ಆಯುಕ್ತರು ಪೌರಾಡಳಿತ ನಿರ್ದೇಶನಾಲಯ, ವಿಶ್ವೇಶ್ವರಯ್ಯ ಗೋಪುರ, ಡಾ:ಅಂಬೇಡ್ಕರ್ ವೀದಿ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳು.
7. ಡೈರೆಕ್ಟರ್ ಆಫ್ ಸೆನ್ಸ್‌ಸ್ ಅಪರೇಷನ್ಸ್ ಇನ್ ಕರ್ನಾಟಕ, ಇ ಅಂಡ್ ಎಫ್ ವಿಂಗ್ಸ್, 7ನೇ ಮಹಡಿ, ಭಾರತ ಸರ್ಕಾರ, ಕೇಂದ್ರಿಯ ಸದನ, ಕೋರಮಂಗಲ, ಬೆಂಗಳೂರು–34.
8. ಬಿಇಎಲ್ ಅಧಿಕಾರಿಗಳು, ಜಾಲಹಳ್ಳಿ, ಬೆಂಗಳೂರು.
9. ರಾಜ್ಯ ಮಾಹಿತಿ ಅಧಿಕಾರಿ, ಎನ್‌ಐಸಿ, ವಿ.ವಿ.ಟವರ್, ಬೆಂಗಳೂರು.
10. ರಾಜ್ಯ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
11. ಸರ್ಕಾರದ ಕಾರ್ಯದರ್ಶಿಗಳು, ಗ್ರಾಅಪಂರಾ ಇಲಾಖೆ, ಬೆಂಗಳೂರು, ಇವರ ಆಪ್ತ ಕಾರ್ಯದರ್ಶಿಗಳು.
12. ಕಛೇರಿ ಪ್ರತಿ.